ರಕ್ಷಣೆ ಕೊಡುವಲ್ಲಿ ವಿಫಲರಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಸದರಿ ಪೊಲೀಸ್ ಠಾಣೆಯನ್ನು ಒಂದು ಸುಸಜ್ಜಿತ ಪೋಲೀಸ್ ಠಾಣೆಯಾಗಿ ಪರಿವರ್ತಿಸಿ ಸಬ್-ಇನ್ಸ್‌ಪೆಕ್ಟರ್ ಮತ್ತು ವಾಹನದೊಂದಿಗೆ ಇತರ ಸಿಬ್ಬಂದಿ ವರ್ಗದವರನ್ನು ನೇಮಿಸುವ ಬಗ್ಗೆ ಅನೇಕ ಸಲ ಸಾರ್ವಜನಿಕರು ಪ್ರಯತ್ನಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಇಲ್ಲ.

ಚೇಳೂರು ಗ್ರಾಮದಲ್ಲಿ ಇರುವ ಔಟ್‌ಪೋಸ್ಟ್ ಪೋಲೀಸ್ ಠಾಣೆಯನ್ನು ಪೋಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು, ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಕ್ಲಬ್‌ಗಳ ಮಾಹಿತಿ.

1623(1940)

ಶ್ರೀ ಚೆನ್ನಿಗಪ್ಪ .ಸಿ(ಕೊರಟಗೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರದಿಂದ ಅನುಮೋದಿತಗೊಂಡು ನಡೆಯುತ್ತಿರುವ ಕ್ಲಬ್‌ಗಳ ಸಂಖ್ಯೆ ಎಷ್ಟು?

ಆ) ಹಲವಾರು ಕ್ಲಬ್‌ಗಳು ಸರ್ಕಾರದಿಂದ ಅನುಮೋದನೆಗೊಳ್ಳದೆ ಸರ್ಕಾರಕ್ಕೆ ವರ್ಷದ ವಂತಿಕೆ ತೆರಿಗೆಯನ್ನು ನೀಡದೆ ಇರುವ ಕ್ಲಬ್‌ಗಳ ಸಂಖ್ಯೆ ಎಷ್ಟು ಇವುಗಳ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಇ) ಈ ಕ್ಲಬ್‌ಗಳಲ್ಲಿ ಅವ್ಯವಹಾರ ಪ್ರಸಂಗಗಳು ಹೆಚ್ಚಾಗಿರುವುದರಿಂದ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಇವುಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಸರ್ಕಾರದಿಂದ ಅನುಮೋದಿತಗೊಂಡು ನಡೆಯುತ್ತಿರುವ ಕ್ಲಬ್‌ಗಳ ಸಂಖ್ಯೆ: 934.

ಆ) ರಾಜ್ಯದಲ್ಲಿ ಅನುಮತಿ ಇಲ್ಲದೆ ಯಾವುದೇ ಕ್ಲಬ್‌ಗಳು ನಡೆಯುತ್ತಿರುವುದಿಲ್ಲ.

ಇ) ಇಂತಹ ಕೇಂದ್ರಗಳಲ್ಲಿ ಜೂಜಾಟ ಮತ್ತು ಇತರೆ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ದೂರುಗಳು ಬಂದಾಗ ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಅಂತಹ ಕೇಂದ್ರಗಳ ಮೇಲೆ ದಾಳಿ ಮಾಡಿ ಕಾನೂನು ರೀತ್ಯ ಕರ್ನಾಟಕ ಪೋಲೀಸ್ ಕಾಯ್ದೆ 78, 79 ಮತ್ತು 80ರ ಅಡಿಯಲ್ಲಿ ಕ್ರಮ ಕೈಗೊಳ್ಳುತ್ತಾರೆ.

ತುಮಕೂರು ಜಿಲ್ಲೆಯಲ್ಲಿ ಪೇದೆಗಳ ನೇಮಕಾತಿ.

1624(1942)

ಶ್ರೀ ಚನ್ನಿಗಪ್ಪ.ಸಿ.(ಕೊರಟಗೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಈಗಾಗಲೇ ಪೇದೆಗಳ ಹುದ್ದೆಗೆ ಸಂದರ್ಶನವು ಉತ್ತಮ ರೀತಿಯಲ್ಲಿ ನಡೆದಿದ್ದು, ಪ್ರತಿಭಾವಂತ ಯುವಕರನ್ನೇ ಪೇದೆ ಹುದ್ದೆಗೆ ಆಯ್ಕೆ ಮಾಡಲು ಅಧಿಕಾರಿ ವರ್ಗದವರು ಶ್ರಮಿಸಿದ್ದು, ಈ ಸಂದರ್ಶನವು ಮುಗಿದು ತಿಂಗಳಾನುಗಟ್ಟಲೇ ಆಗಿದ್ದರೂ ನೇಮಕಾತಿಯ ಆಯ್ಕೆ ಪಟ್ಟಿಯನ್ನು ಪ್ರಕಟಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ನೇಮಕಾತಿಯಲ್ಲಿ ವಿಳಂಬವಾದರೆ ಸಿಬ್ಬಂದಿಯ ಕೊರತೆಯಿಂದ ಜನತೆಗೆ ರಕ್ಷಣೆ, ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಸಕಾಲದಲ್ಲಿ ಇಲಾಖೆಯ ಕೆಲಸ ಕಾರ್ಯಗಳನ್ನು ಪೂರೈಸಲು ತೊಂದರೆಯಾಗುತ್ತಿರುವುದು ನಿಜವಲ್ಲವೇ;

ಇ) ನೇಮಕಾತಿಯ ಆಯ್ಕೆ ಪಟ್ಟಿಯನ್ನು ಕಾಯುತ್ತಿರುವ ಪ್ರತಿಭಾವಂತ ವಯೋಮಿತಿ ಮೀರುತ್ತಿರುವ ಯುವಕರಿಗೆ ಅನುಕೂಲವಾಗುವಂತೆ ಆಯ್ಕೆ ಪಟ್ಟಿಯನ್ನು ಹೊರಡಿಸಲು ನಿರ್ದೇಶನ ನೀಡಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):